ನೋಂದಣಿ ಸಂಖ್ಯೆ Registration No:											

26E201

ವಿಷಯ ಸಂಕೇತ
Subject Code **01**

ಕನ್ನಡ / KANNADA

ಸಮಯ: 3 ಗಂಟೆ 00 ನಿಮಿಷಗಳು] **(ಒಟ್ಟು ಪ್ರಶ್ನೆಗಳ ಸಂಖ್ಯೆ : 52)** **ಗರಿಷ್ಠ ಅಂಕಗಳು: 80**
Time : 3 Hours 00 Minutes] **[Total No. of Questions : 52]** **[Max. Marks : 80**

ಸೂಚನೆ :

1. **"ಅ-ವಿಭಾಗ"**ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

ಅ-ವಿಭಾಗ

I. (ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. **(10 × 1 = 10)**

1) ಯಾರ ಕೈಯಲ್ಲಿ ದರ್ಪಣವಿದ್ದು ಫಲವಿಲ್ಲ ?

(ಅ) ಶಿವ (ಆ) ಅಂಧಕ

(ಇ) ಮರ್ಕಟ (ಈ) ಶಿವಶರಣ

2) ಹಲವು ಹಳ್ಳಗಳು ಸೇರಿ ಏನಾಗುವುದೆಂದು ಕವಿ ಸೋಮನಾಥನ ಅಭಿಪ್ರಾಯ?

(ಅ) ನದಿ (ಆ) ಕೆರೆ

(ಇ) ಕಾಲುವೆ (ಈ) ಸಮುದ್ರ

3) ದುರ್ಜನರ ಎಂತಹ ಮಾತಿಗೆ ಕೊನೆಯಿಲ್ಲವೆಂದು ಪುರಂದರದಾಸರು ಹೇಳಿದ್ದಾರೆ?

(ಅ) ಒಳ್ಳೆಯ ಮಾತಿಗೆ (ಆ) ಕನಿಕರದ ಮಾತಿಗೆ

(ಇ) ಬಿನ್ನಾಣದ ಮಾತಿಗೆ (ಈ) ಕೆಟ್ಟ ಮಾತಿಗೆ

4) ಇವರ ಕಂಬನಿಯನೊರೆಸಿ ಜೀಸಸ್ ಶಿಲುಬೆ ಏರಿದ್ದಾನೆ.

(ಅ) ರಾಜಕಾರಣಿಗಳ

(ಆ) ಶ್ರೀಮಂತರ

(ಇ) ಶೋಷಿತರ

(ಈ) ಬಂಡವಾಳಿಗರ

5) ಕವಯಿತ್ರಿ ಸುಕನ್ಯಾ ಮಾರುತಿ ಹೇಳುವಂತೆ ದನಗಳಿಗೆ-ಜನಗಳಿಗೆ ಏನೇನು ಇಲ್ಲ ?

(ಅ) ನೀರಿಲ್ಲ - ಗಂಜಿಯಿಲ್ಲ (ಆ) ಮೇವಿಲ್ಲ - ನೀರಿಲ್ಲ

(ಇ) ಗಂಜಿಯಿಲ್ಲ - ಊಟವಿಲ್ಲ (ಈ) ಊಟವಿಲ್ಲ - ಹಸಿವಿಲ್ಲ

6) "ಒಂದು ರಾಜ್ಯದ ಎಲ್ಲ ಸೌಲಭ್ಯಗಳನ್ನು ಬಳಸಿಕೊಂಡು ಬದುಕುವ ಜನ ಅಲ್ಲಿನ ಭಾಷೆಯನ್ನು ಬಳಸುವುದು ಅನಿವಾರ್ಯವಾಗುತ್ತದೆ." ಎಂಬ ಹಾ.ಮಾ.ನಾಯಕರ ಮಾತಿನ ಆಶಯವೆಂದರೆ...

(ಅ) ಹೊರ ರಾಜ್ಯದವರು ತಮ್ಮ ಮಾತೃಭಾಷೆಯಲ್ಲೇ ವ್ಯವಹರಿಸಬಹುದು.

(ಆ) ಹೊರ ರಾಜ್ಯದವರು ಯಾವ ಭಾಷೆಯಲ್ಲಾದರೂ ವ್ಯವಹರಿಸಬಹುದು.

(ಇ) ಹೊರ ರಾಜ್ಯದ ವಲಸಿಗರಿಗೆ ಸ್ಥಳೀಯ ಭಾಷಾ ಕಲಿಕೆ ಅನಿವಾರ್ಯವಲ್ಲ.

(ಈ) ಹೊರ ರಾಜ್ಯದಿಂದ ಬಂದು ನೆಲೆಸಿದವರು ಇಲ್ಲಿನ ಭಾಷೆ ಕಲಿಯಬೇಕು.

7) ಶೇಷನು ರಾಮಾಯಣದ ಕತೆಯನ್ನು ಯಾರಿಗೆ ಹೇಳಿದನು?

(ಅ) ವಾತ್ಸ್ಯಾಯನನಿಗೆ (ಆ) ವಾಲ್ಮೀಕಿಗೆ

(ಇ) ಮುದ್ದಣನಿಗೆ (ಈ) ರಾಮನಿಗೆ

8) ದುರ್ಗಪ್ಪನ ಪ್ರಕಾರ ತರ್ಲೆ ಡಿಪಾರ್ಟ್‌ಮೆಂಟ್

(ಅ) ಫಾರೆಸ್ಟ್ ಡಿಪಾರ್ಟ್‌ಮೆಂಟ್

(ಆ) ಪೋಸ್ಟಲ್ ಡಿಪಾರ್ಟ್‌ಮೆಂಟ್

(ಇ) ಟೆಲಿಫೋನ್ ಡಿಪಾರ್ಟ್‌ಮೆಂಟ್

(ಈ) ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟ್

9) ಕೃಷ್ಣೇಗೌಡರ ಆನೆ ಮೊದಲು ಯಾವ ಮಠದಲ್ಲಿತ್ತು ?

(ಅ) ಶೃಂಗೇರಿ ಮಠ (ಆ) ಗೂಳೂರು ಮಠ

(ಇ) ರಂಭಾಪುರಿ ಮಠ (ಈ) ಸಿದ್ದಗಂಗಾ ಮಠ

10) ಕೃಷ್ಣೇಗೌಡರು ಬಯ್ದಿದ್ದರಿಂದ ಇವತ್ತು ಲಾಯದಲ್ಲೇ ಮಲಗಿ ಅದೇನಾದರೂ ಕಳ್ಳತನದಲ್ಲಿ ಹೊರಹೋಗುವುದನ್ನು ಕಂಡರೆ ಸರಿಯಾಗಿ ಚಚ್ಚಿ ಬುದ್ಧಿ ಕಲಿಸಲು ತೀರ್ಮಾನಿಸಿದ್ದ. ಅದು ಒಮ್ಮೆ ಕಾಡಿಗೆ ಹೋಗಿ ಬಂದಾಗಲಿಂದ ಏನೋ ದುರ್ಬುದ್ಧಿ ಶುರುವಾಗಿದೆ ಎಂದು ಅವನಿಗೂ ಶಂಕೆ – ವೇಲಾಯುಧ ಲಾಯದಲ್ಲಿ ಮಲಗಲು ಹೋಗಿದ್ದಕ್ಕೆ ಕೆಳಗಿನ ಜೋಡಿಗಳಲ್ಲಿ ಯಾವುವು ಸರಿಯಾದ ಕಾರಣಗಳು?

(ಒಂದು) ಕೃಷ್ಣೇಗೌಡರು ಬಯ್ದುದು

(ಎರಡು) ಹೆಂಡತಿ ರೇಗಿದ್ದರಿಂದ

(ಮೂರು) ಆನೆಗೆ ಹುಚ್ಚು ಹಿಡಿದಿದೆಯೇ ಎಂದು ತಿಳಿಯಲು

(ನಾಲ್ಕು) ಆನೆ ರಾತ್ರಿ ಲಾಯ ಬಿಟ್ಟು ಹೋಗುತ್ತದೆಯೇ ಎಂದು ತಿಳಿಯಲು.

(ಅ) ಒಂದು ಮತ್ತು ಮೂರು ಸರಿ

(ಆ) ಒಂದು ಮತ್ತು ಎರಡು ಸರಿ

(ಇ) ಒಂದು ಮತ್ತು ನಾಲ್ಕು ಸರಿ

(ಈ) ಮೂರು ಮತ್ತು ನಾಲ್ಕು ಸರಿ

(ಆ) ಬಿಟ್ಟ ಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ. **(5 × 1 = 5)**

(ವಿಜ್ಞಾನಿ, ಚಂದ್ರಭವನ, ಪ್ಲೇವಿಯಾ, ಕಣ್ಣುನೋವು, ನಿಶಾಶರ್ಮ, ಒಕ್ಕಲ ಮಕ್ಕಳನ್ನು)

11) ಬಸಲಿಂಗನಿಗೆ ಕಾಣಿಸಿಕೊಂಡ ತೊಂದರೆ _____

12) ಮುಂಬಯಿಯ ಪ್ರಸಿದ್ಧ ನ್ಯಾಯವಾದಿಯಾದವರು _____

13) ಧಣಿ ಎಂದಿಗೂ _____ ನಂಬುವುದಿಲ್ಲ

14) ಮಗುವೇ ಭೂಮಿಯ ಮೇಲಿನ ಮೊದಲ _____

15) ಲೇಖಕರು ಹೇಳುವ ಹಳ್ಳಿಯ ಹೋಟೆಲಿನ ಹೆಸರು _____

(ಇ) 16) ಹೊಂದಿಸಿ ಬರೆಯಿರಿ. **(5 × 1 = 5)**

ಅ)	ಕದಡಿದ ಸಲಿಲಂ ತಿಳಿವಂದದೆ	1) ಜಾಲಿಯ ಮರದಂತೆ
ಆ)	ಪುಲಿಗೆರೆ ಸೋಮನಾಥ	2) ಚಿಟ್ಟೆ ಮತ್ತು ಜೀವಯಾನ
ಇ)	ಕೀರ್ತನೆ	3) ಜಿ.ಎಸ್.ಶಿವರುದ್ರಪ್ಪ
ಈ)	ಬೆಳಗುಜಾವ	4) ಪಂಪ ರಾಮಾಯಣ
ಉ)	ಹತ್ತಿ... ಚಿತ್ತ... ಮತ್ತು	5) ಪಗೆಯಂ ಬಾಲಕನೆಂಬರೇ
		6) ದ.ರಾ. ಬೇಂದ್ರೆ

ಆ-ವಿಭಾಗ

II. (ಅ) ಯಾವುದಾದರೂ **ಮೂರು** ಪ್ರಶ್ನೆಗಳಿಗೆ **ಎರಡು-ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(3 × 2 = 6)**

17) ರಾವಣನು ಸೊಕ್ಕಿನಿಂದ ಸೀತೆಯನ್ನು ಉದ್ದೇಶಿಸಿ ಆಡಿದ ಮಾತುಗಳಾವುವು?

18) ಶುಚಿ ಮತ್ತು ಸ್ವಾದಗಳನ್ನು ಕುರಿತು ಸೋಮನಾಥನ ಅಭಿಪ್ರಾಯವೇನು?

19) ಬಾನು ಮತ್ತು ಮರದ ನಿತ್ಯನೂತನತೆಯ ಬಗ್ಗೆ ಕವಿ ಬೇಂದ್ರೆ ಏನು ಹೇಳಿದ್ದಾರೆ?

20) ಜೀಸಸ್ ಎಲ್ಲೆಲ್ಲಿ ಶಿಲುಬೆಯೇರಿದ್ದಾನೆ?

(ಆ) ಯಾವುದಾದರೂ **ಮೂರು** ಪ್ರಶ್ನೆಗಳಿಗೆ **ಎರಡು-ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(2 × 2 = 4)**

21) ಡಾ. ಚಂದ್ರಪ್ಪ ಬಸಲಿಂಗನಿಗೆ ಡಾ. ತಿಮ್ಮಪ್ಪನವರ ಬಗ್ಗೆ ಕೊಟ್ಟ ಅಭಿಪ್ರಾಯವೇನು?

22) ಇಂಗ್ಲಿಷ್ ಮೂಲಕವಾದ ಶಿಕ್ಷಣ ಹೇಗಿರುತ್ತದೆ?

23) ಕಲಾಂ ಅವರ ಬದುಕಿನ ಮಂತ್ರ ಯಾವುದು?

24) ಬಾಯಿ ಚಪಲ ಯಾರಿಗೆ ಜಾಸ್ತಿ ಇರುತ್ತದೆ ಎಂದು ವೀರೇಂದ್ರ ಸಿಂಪಿಯವರು ಹೇಳುತ್ತಾರೆ?

(ಇ) ಯಾವುದಾದರೂ **ಮೂರು** ಪ್ರಶ್ನೆಗಳಿಗೆ **ಎರಡು-ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(3 × 2 = 6)**

25) ನಮ್ಮ ಕಡೆ ಕೆಮ್ಮುವುದು ಕಾಲಿಂಗ್ ಬೆಲ್ ಇದ್ದ ಹಾಗೆ ಎಂದು ನಿರೂಪಕರು ಹೇಳುವುದೇಕೆ?

26) ಆನೆ ಸಾಕುವುದರ ಬಗ್ಗೆ ಜನರ ನಂಬಿಕೆ ಏನಾಗಿತ್ತು ?

27) ನಾಯನ್ನು ಕೊಲ್ಲದೆ ನೌಕರರು ಸುಳ್ಳು ಹೇಳಿರುವರೆಂದು ನಿರೂಪಕರು ಯಾವ ಸಲಹೆ ನೀಡಿದರು?

28) ನಾಗರಾಜ ಕೋವಿ ಹಿಡಿದುಕೊಂಡು ಎಲ್ಲಿ ಕುಳಿತಿದ್ದ ?

ಇ-ವಿಭಾಗ

III. (ಅ) ಯಾವುದಾದರೂ **ಎರಡು** ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(2 × 3 = 6)**

29) ತಳುವಿಲ್ಲದೆ ಉಸುರು ಇರುಳೇಕೆ ಬಂದೆ

30) ಬಂಗಾರ ನಿನಗೆ ಸ್ಥಿರವಲ್ಲ

31) ಹಂಬಿಕೊಂಡಿದ್ದಾರೆ ಅಪ್ಪ ಅಮ್ಮನನ್ನು

(ಆ) ಯಾವುದಾದರೂ **ಒಂದು** ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(1 × 3 = 3)**

32) ಆಪರೇಷನ್ ಆಗಬೇಕು ಪರವಾಗಿಲ್ಲವಾ?

33) ನೋಡು ನಿನ್ನ ಎದುರು ಎರಡು ಆಯ್ಕೆಗಳಿವೆ.

34) ನಿನಗಾವ ರಸದೊಳಿಷ್ಟಂ?

(ಇ) ಯಾವುದಾದರೂ **ಒಂದು** ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(1 × 3 = 3)**

35) ಅಯ್ಯೋ ಯಾವೋ ಮದ್ವೆಮನೆ ಕಾಗದ ಸಾರ್

36) ಕೋವಿ ಸಿಕ್ಕಿದೆ. ಆದರೆ ಹೆಣ ಸಿಗಲಿಲ್ಲ

ಈ-ವಿಭಾಗ

IV. (ಅ) ಯಾವುದಾದರೂ **ಎರಡು** ಪ್ರಶ್ನೆಗಳಿಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ. **(2 × 4 = 8)**

37) ರಾವಣನು ಬಹುರೂಪಿಣೀ ವಿದ್ಯೆಯನ್ನು ಒಲಿಸಿಕೊಂಡ ಸಂದರ್ಭವನ್ನು ವಿವರವಾಗಿ ಬರೆಯಿರಿ.

38) ಉರಿಲಿಂಗಪೆದ್ದಿಯು ಹೇಳುವಂತೆ ಗುರು ಲಘುವರ್ತನದಲ್ಲಿ ವರ್ತಿಸಬಾರದೇಕೆ?

39) ತನಗೊದಗಿದ ಸಂಕಟವನ್ನು ಹೇಳಿಕೊಳ್ಳುವ ದ್ರೌಪದಿಯ ಸ್ವಗತದ ನುಡಿಗಳಾವುವು?

40) ಈ ಕೆಳಗಿನ ಪದ್ಯಭಾಗವನ್ನು ಅರ್ಥೈಸಿಕೊಂಡು ಕೇಳಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ.

ಜೀವನ : ಈ ಲಕ್ಷದಾರಿಗಳ ಚದುರಂಗದಾಟದಲಿ, ನೂರು ಬೆಳಕಿನ ಕೆಳಗೆ ಯಾರದೋ ಕೈಗೊಂಬೆಯಾಗಿ ಮುಂದುವರೆಯುವುದು; ಏಳುವುದು, ಬಟ್ಟೆಯಲಿ ಮೈ ತುರುಕಿ ಓಡುವುದು; ರೈಲನೋ ಬಸ್ಸನೋ ಹಿಡಿಯುವುದು; ಸಾಯಂಕಾಲ ಸೋತು ಸುಸ್ತಾಗಿ ರೆಪ್ಪೆಯ ಮೇಲೆ ಹತ್ತು ಮಣ ಆಯಾಸವನು ಹೊತ್ತು ಹನ್ನೊಂದು ಗಂಟೆ ಹೊಡೆವಾಗ ಮನೆಯಲಿ ಕಾದೂ ಕಾದೂ ತೂಕಡಿಸಿ ಮಂಕಾದ ಮಡದಿಯನು ಎಚ್ಚರಿಸುವುದು; ತಣ್ಣಗೆ ಕೊರೆವ ಕೂಳುಂಡು ಬಾಡಿಗೆ ಮನೆಯ ನೆರಳಿನ ಕೆಳಗೆ ಮತ್ತೆ ಸಾವಿರ ಗಾಲಿಯುಜ್ಜುವ ಕನಸು ಬಂಡಿಯ ಕೆಳಗೆ ಹಾಸುಗಂಬಿಯ ಹಾಗೆ ತತ್ತರಿಸುತ್ತ ಮಲಗುವುದು.

(ಅ) ಲಕ್ಷದಾರಿಗಳ ಚದುರಂಗದಾಟ ಯಾವುದು? (ಒಂದು ಅಂಕ)

(ಆ) ಕನಸು ಬಂಡಿಯ ಕೆಳಗೆ ನಿದ್ರಿಸುವುದು ಹೇಗೆ? (ಒಂದು ಅಂಕ)

(ಇ) ಮಹಾನಗರದ ಅವಸರದ ಜೀವನ ಶೈಲಿಗೆ ಎರಡು ಉದಾಹರಣೆ ನೀಡಿ. (ಎರಡು ಅಂಕ)

(ಆ) ಯಾವುದಾದರೂ **ಒಂದು** ಪ್ರಶ್ನೆಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ. **(1 × 4 = 4)**

41) ಅಂತಾರಾಷ್ಟ್ರೀಯ ವಿದ್ಯಮಾನಗಳಿಂದಾಗಿ ವಾಲ್‌ಪರೈಗೆ ಒದಗಿದ ಸಮಸ್ಯೆಗಳೇನು?

42) ಮುಸುರೆ ಪಾತ್ರೆಗಳು ನೀರು ಪಾಲಾದುದು ಹೇಗೆ? ಅವುಗಳನ್ನು ಮೇಲೆತ್ತಲು ಮಾಡಿದ ಪ್ರಯತ್ನಗಳೇನು?

(ಇ) ಯಾವುದಾದರೂ **ಒಂದು** ಪ್ರಶ್ನೆಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ. **(1 × 4 = 4)**

43) ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆಯನ್ನು ವಿವರಿಸಿ. ಅದು ಪೇಟೆಯಲ್ಲಿ ಏನು ಮಾಡುತ್ತಿತ್ತು ?

44) ಟೆಲಿಫೋನ್ ಲೈನ್‌ಮನ್ ತಿಪ್ಪಣ್ಣನ ಸಾವಿನ ಸಂದರ್ಭವನ್ನು ವಿವರಿಸಿ.

ಊ–ವಿಭಾಗ

(ಭಾಷಾಭ್ಯಾಸ)

V. (ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. **(4 × 2 = 8)**

45) ಕೆಳಗಿನ **ಎರಡು** ಪದಗಳಿಗೆ ಸಮಾನಾರ್ಥಗಳನ್ನು ಬರೆಯಿರಿ.

ಕಡಲು, ತೃಷೆ, ಧರೆ

46) ಕೆಳಗಿನ **ಎರಡು** ಶಬ್ದಗಳಿಗೆ ತದ್ಭವ ರೂಪ ಬರೆಯಿರಿ.

ತ್ಯಾಗ, ಮುಖ, ಶಿರ

47) ಕೆಳಗಿನ **ಎರಡು** ಪದಗಳ ಗುಣವಾಚಕಗಳನ್ನು ಗುರುತಿಸಿ ಬರೆಯಿರಿ.

ಬೆಳ್ಳಿಲೋಟ, ಘೋರಪಾತಕಿ, ರಸಬಳ್ಳಿ

48) ಕೆಳಗಿನ **ಎರಡು** ಕ್ರಿಯಾಪದಗಳ ಧಾತುರೂಪಗಳನ್ನು ಬರೆಯಿರಿ.

ನೋಡುವರು, ಕೇಳುತ್ತಾಳೆ, ಕುಣಿದನು

49) ಕೆಳಗಿನ **ಎರಡು** ನುಡಿಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.

ಮೂಗು ತೂರಿಸು, ರೈಲು ಬಿಡು, ಕತ್ತಿ ಮಸೆ

50) ಯಾವುದಾದರೂ **ಎರಡು** ಅನ್ಯದೇಶ್ಯ ಪದಗಳನ್ನು ಬರೆಯಿರಿ.

(ಆ) ಯಾವುದಾದರೂ **ಒಂದು** ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. **(1 × 4 = 4)**

51) ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಶಿಕ್ಷಕರ ಪಾತ್ರ.

ಅಥವಾ

ಅರಣ್ಯ ಸಂರಕ್ಷಣೆಯಲ್ಲಿ ನಮ್ಮ ಪಾತ್ರ

(ಇ) ಯಾವುದಾದರೂ **ಒಂದು** ವಿಷಯವನ್ನು ಕುರಿತು ಪತ್ರ ಬರೆಯಿರಿ. **(1 × 4 = 4)**

52) ದಿವಾಕರ/ಕುಸುಮಾ, ದ್ವಿತೀಯ ಪಿ.ಯು.ಸಿ, ಅಕ್ಕಮಹಾದೇವಿ ಪದವಿ ಪೂರ್ವ ಕಾಲೇಜು, ಸವಣೂರು, ಹಾವೇರಿ ಜಿಲ್ಲೆ – ಇದು ನಿಮ್ಮ ವಿಳಾಸವೆಂದು ಭಾವಿಸಿ ಆನಂದ/ರೂಪಾ, ದ್ವಿತೀಯ ಪಿ.ಯು.ಸಿ, ಮಹಾತ್ಮಗಾಂಧಿ ರಸ್ತೆ, ಮದ್ದೂರು, ಮಂಡ್ಯ ಜಿಲ್ಲೆ ಈ ವಿಳಾಸದಲ್ಲಿರುವ ನಿಮ್ಮ ಗೆಳೆಯ/ಗೆಳತಿಗೆ ನಿಮ್ಮ ಕಾಲೇಜಿನ ಶೈಕ್ಷಣಿಕ ಪ್ರವಾಸದ ಅನುಭವಗಳನ್ನು ಕುರಿತು ಪತ್ರ ಬರೆಯಿರಿ.

ಅಥವಾ

ಭರತ್/ಕಾವೇರಿ, #52, ವಿವೇಕಾನಂದ ರಸ್ತೆ, ಕುವೆಂಪು ನಗರ, ಯಾದಗಿರಿ – 585201. ಇದು ನಿಮ್ಮ ವಿಳಾಸ ಎಂದು ತಿಳಿದು ನಿಮ್ಮ ಕುವೆಂಪುನಗರಕ್ಕೆ ಸುಸಜ್ಜಿತವಾದ ಗ್ರಂಥಾಲಯವನ್ನು ನಿರ್ಮಿಸಿ ಕೊಡುವಂತೆ ವಿನಂತಿಸಿ – ಮಾನ್ಯ ಜಿಲ್ಲಾಧಿಕಾರಿಗಳು, ಜಿಲ್ಲಾ ಕಛೇರಿಗಳ ಸಂಕೀರ್ಣ, ಯಾದಗಿರಿ ಜಿಲ್ಲೆ ಇವರಿಗೆ ಪತ್ರ ಬರೆಯಿರಿ.

———————